**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.2/2023**

| | | |
|---|---|---|
| **ಹೆಸರುಃ** | **ಲೀಲಾವತಿ** | **CW-3** |
| **ತಂದೆ/ಗಂಡ ಹೆಸರುಃ** | **ರವಿಗೌಡ** | **PW-2** |
| **ವಯಸ್ಸುಃ** | **62 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ಅಚ್ಚನಹಳ್ಳಿ** | ದಿನಾಂಕಃ 11-11-2025 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

2 ನೇ ಆರೋಪಿ ನನ್ನ ಮಗ ಇರುತ್ತಾರೆ. 1 ನೇ ಆರೋಪಿ ನನ್ನ ಭಾವ ಇರುತ್ತಾರೆ. ನನಗೆ ಈ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ನಾನು ಘಟನೆಯನ್ನು ಪ್ರತ್ಯಕ್ಷ ನೋಡಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

2 ನೇ ಆರೋಪಿ ಅರಣ್ಯ ಇಲಾಖೆಯಲ್ಲಿ ವಚರ್ ಆಗಿದ್ದು, ಕಾಡಾನೆ ಮತ್ತು ಕಾಡು ಕೋಣಗಳು ಜಮೀನಿನ ಬಳಿ ಬಂದು ಹಾನಿ ಮಾಡುತ್ತಿರುವ ಬಗ್ಗೆ ಬೆಳಿಗ್ಗೆ ಮತ್ತು ಸಂಜೆ ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ದಿಃ 22.03.2022 ರಂದು ಬೆಳಗ್ಗೆ 10 ರ ಸಮಯದಲ್ಲಿ ಆರೋಪಿತರು ಅಚ್ಚನಹಳ್ಳಿ ಮಕ್ಕಿ ಮನೆ ತೋಟದ ಬಳಿ ಹೋಗುತ್ತಿದ್ದಾಗ 2 ನೇ ಆರೋಪಿ ಬಂದೂಕನ್ನು ಬಲ ಹೆಗಲ ಮೇಲೆ ನಿರ್ಲಕ್ಷತನದಿಂದ ಇಟ್ಟುಕೊಂಡು ಹೋಗುತ್ತಿದ್ದಾಗ ಬದು ದಾಟುವಾಗ ಒಂದು ಕಲ್ಲನ್ನು ಎಡವಿ ಕಾಲು ಜಾರಿ ಬಿದ್ದಾಗ, ಬಂದೂಕು ಕಲ್ಲಿಗೆ ತಾಗಿ ಫಯರ್ ಆಗಿ ಸಿಡಿದ ಗುಂಡು 2 ನೇ ಆರೋಪಿಯ ಬಲ ಭುಜಕ್ಕೆ ತಗುಲಿ ರಕ್ತಗಾಯವಾಗಿದ್ದು,

ಆನಂತರ ಅವರು ಮನೆಗೆ ಬಂದು ನಮಗೆ ವಿಚಾರ ತಿಳಿಸಿದಾಗ ಅವರನ್ನು ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಜನಪ್ರಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ತನ್ನ ಹೆಸರಿನಲ್ಲಿ ಇದ್ದ ಬಂದೂಕನ್ನು 2 ನೇ ಆರೋಪಿಗೆ ಒತ್ತಾಯವಾಗಿ ಕೊಟ್ಟು ಪರವಾನಗಿ ನಿಬಂಧನೆಗಳನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಂದೂಕಿನ ನಂಬರ್ 23645 ಆಗಿರುತ್ತದೆ ಎಂದರೆ ಗೊತ್ತಿಲ್ಲ.

ನಾನು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಹೇಳಿಕೆಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನನಗೆ ಈ ಘಟನೆ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತರು ನನ್ನ ಮಗ ಮತ್ತು ಸಂಬಂಧಿ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ**

**ಸಕಲೇಶಪುರ**